ಇ. ಇಲ್ಲ

ಈ. 8,27,831

ಉ. ಇಲ್ಲ

ಉದ್ಯಮಗಳ ಮಾಲಿನ್ಯ ತಡೆಗಟ್ಟಲು ತೆಗೆದುಕೊಂಡ ಕ್ರಮಗಳು

507 (350): ಶ್ರೀ ಆರ್. ದಯಾನಂದ್‌ರಾವ್ (ಗಾಂಧಿನಗರ)

ಮಾನ್ಯ ವಿಜ್ಞಾನ, ತಂತ್ರಜ್ಞಾನ ಮತ್ತು ಜೀವಿ ಪರಿಸ್ಥಿತಿ ಶಾಸ್ತ್ರ ಪರಿಸರ ಮತ್ತು ಮಲೆನಾಡು ಅಭಿವೃದ್ಧಿ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1. ಎಷ್ಟು ಮಾಲಿನ್ಯಕಾರಕ ಉದ್ದಿಮೆಗಳನ್ನು ಬೆಂಗಳೂರು ನಗರದಲ್ಲಿ ಪತ್ತೆ ಹಚ್ಚಲಾಗಿದೆ ?

2. ಈ ಉದ್ದಿಮೆಗಳಿಗೆ ಮಾಲಿನ್ಯ ತಡೆಗಟ್ಟಲು ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ?

3. ಎಷ್ಟು ಉದ್ದಿಮೆಗಳಿಗೆ ಕಾನೂನು ರೀತ್ಯಾ ಮಾಲಿನ್ಯ ತಡೆಗಟ್ಟಲು ನೋಟಿಸು ಕೊಡಲಾಗಿದೆ ?

4. ಎಷ್ಟು ಹೆಚ್ಚು ಮಾಲಿನ್ಯಕಾರಕ ಉದ್ದಿಮೆಗಳನ್ನು ಮುಚ್ಚಿಸಲಾಗಿದೆ ?

ಶ್ರೀ ಎನ್. ಜಿ. ಹಾಲಪ್ಪ (ವಿಜ್ಞಾನ ಮತ್ತು ತಂತ್ರಕಲೆ, ಜೀವಿ ಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ ಮತ್ತು ಮಲೆನಾಡು ಅಭಿವೃದ್ಧಿ ಮಂಡಳಿ ರಾಜ್ಯ ಸಚಿವರು):-

1. ಒಟ್ಟು 664.

2. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1974 ಮತ್ತು (ವಾಯು ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ), 1981 ಕಾಯ್ದೆಗಳನ್ನು ಜಾರಿಗೊಳಿಸುತ್ತಿದೆ. ಈ ಉದ್ದಿಮೆಗಳು ಸೂಕ್ತ ಜಲ ಶುದ್ಧೀಕರಣ ಘಟಕಗಳನ್ನು ಮತ್ತು ವಾಯು ಮಾಲಿನ್ಯ ನಿಯಂತ್ರಣ ಘಟಕಗಳನ್ನು ಅಳವಡಿಸಿ ಹೊಗೆ ಮತ್ತು ಕಲುಷಿತ ನೀರನ್ನು ಮಂಡಳಿಯು ನಿಗದಿಪಡಿಸಿರುವ ಗುಣ ಮಾನಕಗಳಿಗೆ ಶುದ್ಧೀಕರಿಸುವಂತೆ ಒತ್ತಾಯಿಸುತ್ತಿದೆ. ಬೆಂಗಳೂರು ನಗರದಲ್ಲಿ ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) 1974 ಕಾಯ್ದೆಗಳನ್ನು ಉಲ್ಲಂಘಿಸಿದ ಕಾರಣ ಒಂದು ಕಾರ್ಖಾನೆಯ ವಿರುದ್ಧ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಲಾಗಿದೆ. ಹಾಗೂ ಎರಡು ಅತಿ ಮಾಲಿನ್ಯಕಾರಕ ಉದ್ದಿಮೆಗಳನ್ನು ಮುಚ್ಚಲು ಪಕ್ಕ ಆದೇಶ ನೀಡಲಾಗಿದೆ.

3. ಗುರುತಿಸಲಾದ ಎಲ್ಲಾ ಮಾಲಿನ್ಯಕಾರಕ ಕಾರ್ಖಾನೆಗಳಿಗೆ ನೋಟೀಸನ್ನು ನೀಡಲಾಗಿದ್ದು ಅವುಗಳು ಜಲ ಮತ್ತು ವಾಯು ಮಾಲಿನ್ಯ ನಿಯಂತ್ರಣ ಕಾಯ್ದೆಗಳನ್ವಯ ಕ್ರಮ ತೆಗೆದುಕೊಳ್ಳುವಂತೆ ಒತ್ತಾಯಿಸಲಾಗುತ್ತಿದೆ.

4. ಎರಡು.

ಹೊಸ ಪೋಲೀಸ್ ಠಾಣೆಗಳು ಮತ್ತು ಇದರ ಸಿಬ್ಬಂದಿ ವರ್ಗ.

509 (900): ಶ್ರೀ ವಿಜಯಕುಮಾರ್ ಶೆಟ್ಟಿ (ಸುರತ್‌ಕಲ್)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಆ. ರಾಜ್ಯದಲ್ಲಿ ಕಳೆದ 5 ವರ್ಷಗಳಿಂದ ಪ್ರಾರಂಭಿಸಲಾಗಿರುವ ಹೊಸ ಪೊಲೀಸ್ ಠಾಣೆಗಳ ಸಂಖ್ಯೆಯೆಷ್ಟು ?

ಆ. ರಾಜ್ಯದ ಗ್ರಾಮೀಣ ಪೊಲೀಸ್ ಠಾಣೆಗಳಲ್ಲಿರುವ ಪೊಲೀಸ್ ಕನಿಷ್ಠ ಸಿಬ್ಬಂದಿಗಳ ಸಂಖ್ಯೆ ಎಷ್ಟು ?

ಇ. ರಾಜ್ಯದಲ್ಲಿ ಪೊಲೀಸ್ ಠಾಣೆಗಳನ್ನು ಹೆಚ್ಚಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು):–

ಅ. ರಾಜ್ಯದಲ್ಲಿ ಕಳೆದ 5ವರ್ಷಗಳಿಂದ ಅಂದರೆ 1989ರಿಂದ 1993ರ ವರೆಗೆ ಒಟ್ಟು 51ಪೊಲೀಸ್ ಠಾಣೆಗಳು ಮಂಜೂರಾಗಿವೆ.

ಆ. ರಾಜ್ಯದ ಗ್ರಾಮೀಣ ಪೊಲೀಸ್ ಠಾಣೆಗಳಿಗೆ ಕನಿಷ್ಠ ಸಿಬ್ಬಂದಿಯು ಒಂದು ಪೊಲೀಸ್ ಸಬ್ ಇನ್ಸ್‌ಪೆಕ್ಟರ್ 2ಅಸಿಸ್ಟೆಂಟ್ ಸಬ್ ಇನ್ಸ್‌ಪೆಕ್ಟರ್‌ಗಳು, 7 ಹೆಡ್‌ಕಾನ್ಸ್‌ಟೆಬಲ್‌ಗಳು ಹಾಗೂ 21 ಪೊಲೀಸ್ ಪೇದೆಗಳು ಇರಬೇಕು.

ಇ. 1992–93ಕ್ಕೆ 15, 1993–94ಕ್ಕೆ 15, 1994–95ನೇ ಸಾಲಿಗಾಗಿ 10ರಂತೆ ಒಟ್ಟು 40 ಪೊಲೀಸ್ ಠಾಣೆಗಳನ್ನು ತೆರೆಯಲು ಸರ್ಕಾರ ಆದೇಶ ಹೊರಡಿಸಿದೆ.

ಮಂಗಳೂರಿನಿಂದ ತಮಿಳುನಾಡಿನ ವೇಲಾಂಗಣಿಗೆ ಬಸ್ಸು ಸೌಕರ್ಯ.

510 (899): ಶ್ರೀ ವಿಜಯಕುಮಾರ್ ಶೆಟ್ಟಿ (ಸುರತ್‌ಕಲ್)

ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಮಂಗಳೂರಿನಿಂದ ತಮಿಳುನಾಡಿನ ವೇಲಾಂಗಣಿಗೆ ಸಹಸ್ರಾರು ಭಕ್ತಾದಿಗಳು ಪ್ರಯಾಣ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ:

ಆ. ಮಂಗಳೂರು–ವೇಲಾಂಗನಿ ಮಧ್ಯೆ ನೇರ ಬಸ್ಸು ಸಂಪರ್ಕಕ್ಕೆ ಸರ್ಕಾರ ಕೈಗೊಳ್ಳಲಿರುವ ಕ್ರಮವೇನು ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):–

ಅ. ಹೌದು.

ಆ. ಈ ಮಾರ್ಗವನ್ನು ಕರ್ನಾಟಕ ಮತ್ತು ತಮಿಳುನಾಡು ನಡುವಣ ಅಂತರರಾಜ್ಯ ಸಾರಿಗೆ ಒಪ್ಪಂದದಲ್ಲಿ ಸೇರಿಸಲು ಉದ್ದೇಶಿಸಲಾಗಿದೆ.

ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ ಬಗ್ಗೆ.

511(820): ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ)

ಮಾನ್ಯ ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಕ.ರಾ.ಪ್ರ.ಅ.ನಿ. ಹೋಟೆಲುಗಳ ಒಟ್ಟು ಸಂಚಿತ ನಷ್ಟವೆಷ್ಟು ?

ಆ. ಅದು ಲಾಭವನ್ನು ಗಳಿಸಿದೆಯೆ ? ಹಾಗಿದಲಿ ಎಂದು ?